2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ **35/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚೆನ್ನಮ್ಮ | ಪಿಡಬ್ಲೂ - 7 |
| ಗಂಡನ ಹೆಸರು | - | ಚೆನ್ನಬಸಯ್ಯ | ಸಿಡಬ್ಲೂ - 7 |
| ವಯಸ್ಸು | - | 50 ವರ್ಷ | |
| ಉದ್ಯೋಗ | - | ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಅಟೆಂಡರ್ ಕೆಲಸ | |
| ವಾಸ ಸ್ಥಳ | - | ಕೆಂಗಟ್ಟೆ | |

ದಿನಾಂಕಃ 18.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**-**

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಗೊತ್ತಿಲ್ಲ. ನಾನು ಅವರನ್ನು ನೋಡಿಲ್ಲ. ಮೃತ ರುದ್ರಸ್ವಾಮಿ ನನ್ನ ಮಗ. ಚಾಸಾ.8 ನನ್ನ ಅಣ್ಣ. ಚಾಸಾ.9 ನನ್ನ ಚಿಕ್ಕಮ್ಮ. ಚಾಸಾ.11 ನನ್ನ ಮಗಳು. ಚಾಸಾ.14 ನನ್ನ ಸೊಸೆ ಅಂದರೆ ಮೃತ ರುದ್ರಸ್ವಾಮಿಯ ಹೆಂಡತಿ.

2. ನನಗೆ ಇಬ್ಬರು ಮಕ್ಕಳು. ಅವರೆಂದರೆ ರುದ್ರಸ್ವಾಮಿ ಮತ್ತು ಚಾಸಾ.11 ಲತಾ. ಈಗ್ಗೆ **4** ವರ್ಷಗಳ ಹಿಂದೆ ನನ್ನ ಮಗ ರುದ್ರಸ್ವಾಮಿ ಮತ್ತು ಆತನ ಹೆಂಡತಿಯಾದ ಚಾಸಾ.14 ವಾಣಿ ಕೆಂಗಟ್ಟೆಯಲ್ಲಿ ನಾನು ಬಾಡಿಗೆಗೆ ವಾಸವಿದ್ದ ಮನೆಯಲ್ಲಿ ನಮ್ಮೊಂದಿಗೆ ವಾಸವಾಗಿದ್ದರು. ಅವರಿಗೆ ಅರ್ಜುನ ಎಂಬ ಒಬ್ಬ ಮಗನಿದ್ದಾನೆ. ಈಗ್ಗೆ 4 ವರ್ಷಗಳ ಹಿಂದೆ ರುದ್ರಸ್ವಾಮಿ

ಮನೆಯನ್ನು ಬಿಟ್ಟು ಹೋಗಿದ್ದನು. ಆತನನ್ನು ನಾವು ಎಲ್ಲಾ ಕಡೆ ಹುಡುಕಾಡಿದೆವು. ಆದರೆ ಆತ ಸಿಗಲಿಲ್ಲ. ಆ ಬಗ್ಗೆ ನ್ಯಾಮತಿ ಪೊಲೀಸರಿಗೆ ದೂರನ್ನು ಕೊಟ್ಟಿದ್ದೆವು. ಅವರು ನನ್ನ ಮಗನನ್ನು ಹುಡುಕಿ ಕೊಡುವುದಾಗಿ ಹೇಳಿದ್ದರು, ಆದರೆ ಇಂದಿಗೂ ನನ್ನ ಮಗ ನನಗೆ ಸಿಕ್ಕಿಲ್ಲ. ನನ್ನ ಮಗ ಬದುಕಿದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಸಂಬಂಧಿಸಿದಂತೆ ಯಾವುದೇ ಪೊಲೀಸರು ನನ್ನನ್ನು ವಿಚಾರಿಸಿಲ್ಲ.

3. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಅಂಟಿಸಲಾಗಿರುವ ಫೋಟೋ ನನ್ನದು ಮತ್ತು ಅದರಲ್ಲಿ ಕಂಡು ಬರುವ ಸಹಿ ನನ್ನದು ಎಂದು ನುಡಿದಿರುತ್ತಾರೆ. ಸದರಿ ದಾಖಲೆಯು DNA ಪರೀಕ್ಷೆಗಾಗಿ ರಕ್ತದ ಮಾದರಿಯನ್ನು ಪಡೆಯುವ ಸಮಯದಲ್ಲಿ ದಾಖಲು ಮಾಡಿಕೊಳ್ಳಲಾಗಿದೆ ಎಂದು ಹೇಳಲಾದ Identification form ಆಗಿದ್ದು, ಅದನ್ನು ನಿಪಿ.14 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

4. ಸಾಕ್ಷಿಗೆ ಈಗಾಗಲೇ ನಿಪಿ.3 ಮತ್ತು 5 ಎಂದು ಗುರುತಿಸಲಾಗಿರುವ ಫೋಟೋಗಳನ್ನು ಮತ್ತು ಮತ್ತೊಂದು ಫೋಟೋವನ್ನು ತೋರಿಸಲಾಗಿ ಅವುಗಳಲ್ಲಿ ಕಂಡು ಬರುವ ರುಂಡ ಮತ್ತು ಮುಂಡ ಯಾರದ್ದು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ಈಗ್ಗೆ 4 ವರ್ಷಗಳ ಹಿಂದೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಸದರಿ ದಾಖಲೆಯಲ್ಲಿ ಕಂಡು ಬರುವ ಫೋಟೋವನ್ನು ನನ್ನ ಮಗ ಕಾಣೆಯಾದ ಸಮಯದಲ್ಲಿ ನಾನು ಸದರಿ ಪೊಲೀಸರಿಗೆ ನೀಡಿದ್ದೇನೆ. ಆ ದಿನದಂದು ಪೊಲೀಸರು ನನ್ನನ್ನು ಬೇರೆ ಎಲ್ಲಿಗೂ ಕರೆದುಕೊಂಡು ಹೋಗಿರಲಿಲ್ಲ.

6. ಇಲ್ಲಿಯವರೆಗೂ ನನಗೆ ನನ್ನ ಮಗನ ಬಗ್ಗೆ ಯಾವುದೇ ಮಾಹಿತಿ ತಿಳಿದುಬಂದಿಲ್ಲ. ಅಜ್ಜಂಪುರ ಪೊಲೀಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಅವರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

7. ನನ್ನ ಮಗ ರುದ್ರಸ್ವಾಮಿ ಘಟನೆಯ ಪೂರ್ವದಲ್ಲಿ ಸುಮಾರು 12 ವರ್ಷಗಳ ಹಿಂದೆ ಮನೆಯನ್ನು ಬಿಟ್ಟು ಹೋಗಿ ಬೆಂಗಳೂರಿನಲ್ಲಿ ನೆಲೆಸಿದ್ದನು ಎಂದರೆ ಸಾಕ್ಷಿ ಹೋಗಿದ್ದನು ಆದರೆ ವಾಪಾಸ್ಸು ಬಂದಿದ್ದನು ಎನ್ನುತ್ತಾರೆ. ಆಗ್ಗೆ ಸುಮಾರು 10 ವರ್ಷಗಳ ಹಿಂದೆ ನನ್ನ ಮಗ ಚಾಸಾ.14 ರವರನ್ನು ಪ್ರೀತಿಸಿ ಮದುವೆಯಾಗಿದ್ದನು ಎಂದರೆ ಸರಿ. ಚಾಸಾ.14 ರವರಿಗೆ ಆಗಾಗಲೇ ಮದುವೆಯಾಗಿ ಆಕೆಗೆ ಐಶ್ವರ್ಯ ಎಂಬ ಮಗಳು ಇದ್ದಳು ಎಂದರೆ ಸರಿ. ನಂತರ ನನ್ನ ಮಗ ಮತ್ತು ಚಾಸಾ.14 ರವರಿಗೆ ಅರ್ಜುನ ಎಂಬ ಮಗ ಜನಿಸಿದನು ಎಂದರೆ ಸರಿ. ಮದುವೆಯಾದ ಬಳಿಕ ರುದ್ರಸ್ವಾಮಿಗೆ ಆತನ ಹೆಂಡತಿ ವಾಣಿಯೊಂದಿಗೆ ಸಂಸಾರದಲ್ಲಿ

ಮನಸ್ತಾಪ ಬಂದು ಘಟನೆಯ ಪೂರ್ವದಲ್ಲಿ 5-6 ವರ್ಷಗಳ ಹಿಂದಿನಿಂದ ಅವರಿಬ್ಬರು ಬೇರೆಯಾಗಿದ್ದರು ಎಂದರೆ ಸರಿ. ಅವರ ಮಗ ಅರ್ಜುನ್ ಸಹ ಚಾಸಾ.14 ರವರೊಂದಿಗೆ ವಾಸಿಸುತ್ತಿದ್ದನು ಎಂದರೆ ಸರಿ. ಘಟನೆಯ ಪೂರ್ವದಲ್ಲಿ 5-6 ವರ್ಷಗಳ ಹಿಂದಿನಿಂದ ನನ್ನ ಮಗ ನಮ್ಮ ಮನೆಗೆ ಬಂದಿರುವುದಿಲ್ಲ ಎಂದರೆ ಸರಿ.

8. ಘಟನೆಯ 15 ದಿನಗಳ ಹಿಂದೆ ನನ್ನ ಮಗ ರುದ್ರಸ್ವಾಮಿ ಚೆನ್ನಗಿರಿ ತಾಲ್ಲೂಕು ಮರಬನಹಳ್ಳಿಯಲ್ಲಿರುವ ನನ್ನ ತಾಯಿ ಮಹದೇವಮ್ಮಳ ಮನೆಗೆ ಹೋಗಿದ್ದನು ಎಂದರೆ ಸಾಕ್ಷಿ ಆಗ ಹೋಗಿ ಕಾಣೆಯಾದವನು ಇನ್ನೂ ಮನೆಗೆ ಬಂದಿಲ್ಲ ಎನ್ನುತ್ತಾರೆ. ಆಗ ನಾನು ಮರಬನಹಳ್ಳಿಯಲ್ಲಿರುವ ನನ್ನ ಚಿಕ್ಕಮ್ಮನಾದ ಚಾಸಾ.9 ರವರ ಮನೆಗೆ ಹೋಗಿದ್ದೆನು ಎಂದರೆ ಸರಿಯಲ್ಲ.

9. ಆಗ ನನ್ನ ಮಗ ನನ್ನನ್ನು, ನನ್ನ ತಾಯಿ ಮಹದೇವಮ್ಮನನ್ನು ಮತ್ತು ನನ್ನ ಚಿಕ್ಕಮ್ಮನಾದ ಚಾಸಾ.9 ರವರನ್ನು ಆತನ ಕಾರಿನಲ್ಲಿ ಬೆಂಗಳೂರಿನ ವಿದ್ಯಾರಣ್ಯಪುರಂನಲ್ಲಿರುವ ಆತನ ಮನೆಗೆ ಕರೆದುಕೊಂಡು ಹೋಗಿದ್ದನು ಎಂದರೆ ಸರಿ. ಆ ರೀತಿ ನಾವು ನನ್ನ ಮಗನ ಮನೆಗೆ ಹೋದ 2 ದಿನಗಳ ಬಳಿಕ 1 ನೇ ಆರೋಪಿ ಆಶಾ ನನ್ನ ಮಗನಾದ ರುದ್ರಸ್ವಾಮಿಯ ಮನೆಗೆ ಬಂದಿದ್ದಳು ಎಂದರೆ ಸರಿಯಲ್ಲ. ಆಗ ನನ್ನ ಮಗ ಆಕೆಯನ್ನು ನಮಗೆ ಪರಿಚಯಿಸಿ ಆಕೆ ಚೆನ್ನಗಿರಿಯ ಹತ್ತಿರವಿರುವ ಬೆಂಕಿಕೆರೆ ಗ್ರಾಮದವಳು ಮತ್ತು ಆಕೆಯ ಗಂಡ ಇಂಜಿನಿಯರ್ ಕೆಲಸ

ಮಾಡುತ್ತಿದ್ದಾನೆಂದು ತಿಳಿಸಿದಳು ಎಂದರೆ ಸರಿಯಲ್ಲ. ನಂತರ ನನ್ನ ಮಗ ನಮ್ಮನ್ನು ವಿದ್ಯಾರಣ್ಯಪುರಂನಲ್ಲಿರುವ 1 ನೇ ಆರೋಪಿಯ ಮನೆಗೂ ಕರೆದುಕೊಂಡು ಹೋಗಿದ್ದನು ಎಂದರೆ ಸರಿಯಲ್ಲ. 3-4 ದಿನಗಳ ನಂತರ ನಾವು ವಾಪಾಸ್ಸು ಊರಿಗೆ ಬಂದೆವು ಎಂದರೆ ಸರಿ.

10. ದಿನಾಂಕ 07.11.2018 ರಂದು ಬೆಳಿಗ್ಗ 8.00 ಗಂಟೆಗೆ ನಾನು ನನ್ನ ಮಗನಾದ ರುದ್ರಸ್ವಾಮಿಗೆ ಫೋನ್ ಮಾಡಿದಾಗ ಕಾರಿನಲ್ಲಿ ಮರಬನಹಳ್ಳಿಯಲ್ಲಿರುವ ನನ್ನ ತಾಯಿಯ ಮನೆಗೆ ಬರುತ್ತಿರುವುದಾಗಿ ಮತ್ತು ಆ ಸಮಯದಲ್ಲಿ ಆತ ಚಿತ್ರದುರ್ಗದಲ್ಲಿ ಇರುವುದಾಗಿ ತಿಳಿಸಿದನು ಎಂದರೆ ಸರಿಯಲ್ಲ ನಂತರ ಅದೇ ದಿನ ಬೆಳಿಗ್ಗ 10.00 ಗಂಟೆಗೆ ನಾನು ನನ್ನ ಮಗಳಾದ ಚಾಸಾ.11 ರವರಿಗೆ ಫೋನ್ ಮಾಡಿ ನನ್ನ ಮಗನ ಬಗ್ಗೆ ವಿಚಾರಿಸಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ.11 ರವರು ಆ ದಿನ ಬೆಳಿಗ್ಗ 9.30 ಗಂಟೆಗೆ ನನ್ನ ಮಗನು ಆಕೆಯ ಮನೆಗೆ ಹೋಗಿ ತಿಂಡಿ ತಿಂದು ಬೆಂಕಿ ಕೆರೆಯಲ್ಲಿರುವ 1 ನೇ ಆರೋಪಿಯ ಮನೆಗೆ ಹೋಗುವುದಾಗಿ ಹೇಳಿ ಹೋದನು ಎಂದು ತಿಳಿಸಿದಳು ಎಂದರೆ ಸರಿಯಲ್ಲ. ಆ ದಿನ ಮಧ್ಯಾಹ್ನ ನಾನು ಸುಮಾರು 3.00 ರಿಂದ .4.00 ಗಂಟೆಗೆ ನನ್ನ ಮಗನ ಮೊಬೈಲ್ ಸಂಖ್ಯೆ 9738662167 ಗೆ ಕರೆ ಮಾಡಿದಾಗ ಅದು ಸ್ವಿಚ್ ಆಫ್ ಆಗಿತ್ತು ಎಂದರೆ ಸರಿಯಲ್ಲ. ನಂತರ ನಾನು ಚಾಸಾ.11 ರವರಿಗೆ ಕರೆ ಮಾಡಿದಾಗ ಆಕೆ ಸಹ ನನ್ನ ಮಗನ ಫೋನ್ ಸ್ವಿಚ್ ಆಫ್ ಆಗಿರುವುದಾಗಿ ತಿಳಿಸಿದಳು ಎಂದರೆ

ಸರಿಯಲ್ಲ.

11. ನಂತರ ದಿನಾಂಕ 09.11.2018 ರಂದು ನಾನು ಚಾಸಾ.11 ರವರಿಂದ 1 ನೇ ಆರೋಪಿಯ ಮೊಬೈಲ್ ಸಂಖ್ಯೆ 8746902262 ರನ್ನು ಪಡೆದುಕೊಂಡು ಆಕೆಗೆ ಫೋನ್ ಮಾಡಿ ನನ್ನ ಮಗನ ಬಗ್ಗೆ ವಿಚಾರಿಸಿದ್ದೇನೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ದಿನಾಂಕ 07.11.2018 ರಂದು ಬೆಳಿಗ್ಗೆ ಸುಮಾರು 10.30 ಗಂಟೆಗೆ ನನ್ನ ಮಗ ರುದ್ರಸ್ವಾಮಿ ಆಕೆಯ ಮನೆಗೆ ಹೋಗಿದ್ದಾಗಿ, ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಆಕೆಯ ತಂದೆ ಮತ್ತು ತಮ್ಮನಾದ 2 ಮತ್ತು 3 ನೇ ಆರೋಪಿತರೊಂದಿಗೆ ಊಟ ಮಾಡುವಾಗ ರುದ್ರಸ್ವಾಮಿಗೆ ಯಾವುದೋ ಫೋನ್ ಕಾಲ್ ಬಂದಿದ್ದಾಗಿ ಮತ್ತು ಆಗ ರುದ್ರಸ್ವಾಮಿ ಮಾತನಾಡುತ್ತಾ ಕಾರನ್ನು ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದಳು ಎಂದರೆ ಸರಿಯಲ್ಲ.

12. ದಿನಾಂಕ 10.11.2018 ರಂದು ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಶಿವಮೊಗ್ಗದ ಗುರುಕುಲ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿಯಲ್ಲ.

13. ಆಗ ಚಾಸಾ.8 ರವರು ನನಗೆ ಫೋನ್ ಮಾಡಿ ಬುಕ್ಕಾಂಬೂದಿ ಕೆರೆಯಲ್ಲಿ ಸುಮಾರು 30-35 ವರ್ಷದ ರುಂಡವಿಲ್ಲದ ಗಂಡಸಿನ ದೇಹ ಸಿಕ್ಕಿರುವುದಾಗಿ ಮತ್ತು ಮೃತದೇಹದ ಮೇಲೆ ವಾಣಿ ಮತ್ತು ಐಶ್ವರ್ಯ ಎಂಬ ಹಚ್ಚೆ ಗುರುತು ಇರುತ್ತದೆ ಎಂದು ವಿಜಯ ಕರ್ನಾಟಕ ಪೇಪರ್ ನಲ್ಲಿ

ಬಂದಿದೆ, ಅದು ರುದ್ರಸ್ವಾಮಿಯದೇ ಇರಬಹುದು ಎಂದು ತಿಳಿಸಿ ಊರಿಗೆ ಬೇಗನೇ ಬಾ ಎಂದು ಹೇಳಿದನು ಎಂದರೆ ಸರಿಯಲ್ಲ.

14. ನಂತರ ನಾನು ಕೂಡಲೇ ಕೆಂಗಟ್ಟೆಗೆ ಹೋಗಿ ಅಲ್ಲಿಂದ ನಾನು ಚಾಸಾ.8, ಚಾಸಾ.9 ರವರು ಸೇರಿ ಮರಬನಹಳ್ಳಿಯ ರಾಜು ಎಂಬುವವರ ಕಾರಿನಲ್ಲಿ ರಾತ್ರಿ 9.00 ಗಂಟೆಗೆ ಅಜ್ಜಂಪುರ ಪೊಲೀಸ್ ಠಾಣೆಗೆ ಹೋದೆವು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು ನಮಗೆ ಪ್ರಕರಣದ ವಿಚಾರವನ್ನು ತಿಳಿಸಿ ಅಮಾನತುಪಡಿಸಿಕೊಂಡಿದ್ದ ಒಂದು ಕಾಫಿ ಬಣ್ಣದ ಕಾರನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಕಾರು ನನ್ನ ಮಗ ರುದ್ರಸ್ವಾಮಿಯದ್ದಾಗಿತ್ತು ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನ ಮಗ ರುದ್ರಸ್ವಾಮಿಯ ರುಂಡವಿಲ್ಲದ ಮೃತ ದೇಹದ ಫೋಟೋಗಳನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ನೋಡಲಾಗಿ ಅದು ನನ್ನ ಮಗ ರುದ್ರಸ್ವಾಮಿಯ ಮೃತದೇಹದ್ದಾಗಿರುತ್ತದೆ ಎಂದರೆ ಸರಿಯಲ್ಲ.

15. ನಂತರ ಪೊಲೀಸರು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿರುವ ಸದರಿ ಮೃತ ದೇಹವನ್ನು ನೋಡಿಕೊಂಡು ಬರುವಂತೆ ನಮ್ಮನ್ನು ಪೊಲೀಸರೊಂದಿಗೆ ಕಳುಹಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ನಾವು ಅಲ್ಲಿಗೆ ಹೋಗುವಷ್ಟರಲ್ಲಿ ಮಧ್ಯ ರಾತ್ರಿ 12.00 ಗಂಟೆಯಾಗಿದ್ದರಿಂದ ಮಾರನೇ ದಿನ ಅಂದರೆ ದಿನಾಂಕ 11.11.2018 ರಂದು ಬೆಳಿಗ್ಗೆ ನಾವೆಲ್ಲರೂ ಸದರಿ ಶವಾಗಾರಕ್ಕೆ ಹೋಗಿ ನೋಡಿದಾಗ ಅಲ್ಲಿದ್ದ

ಶವ ನನ್ನ ಮಗ ರುದ್ರಸ್ವಾಮಿಯ ರುಂಡವಿಲ್ಲದ ಮೃತ ದೇಹವಾಗಿರುತ್ತದೆ ಎಂದರೆ ಸರಿಯಲ್ಲ.

16. ಸದರಿ ದೇಹವನ್ನು ನೋಡಲಾಗಿ ಕುತ್ತಿಗೆಯನ್ನು ಯಾವುದೋ ಬಲವಾದ ಆಯುಧದಿಂದ ಕಡಿದು ಕೊಲೆ ಮಾಡಿರುವುದಾಗಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಮಗನ ಬಲ ಎದೆಯ ಮೇಲೆ ಐಶ್ವರ್ಯ ಎಂದು, ಎಡತೋಳಿನ ರಟ್ಟೆಯಲ್ಲಿ ವಾಣಿ ಮತ್ತು ಬೂದಿಸ್ವಾಮಿ ಎಂಬ ಹಚ್ಚೆಯ ಗುರುತುಗಳು ಇದ್ದವು ಎಂದರೆ ಸರಿಯಲ್ಲ. ಘಟನೆಯ ಬಗ್ಗೆ ಕಾರಣ ತಿಳಿಯಲಾಗಿ ಆಗ್ಗೆ 4-5 ದಿನಗಳ ಹಿಂದೆ ಯಾರೋ ದುರುದ್ದೇಶದಿಂದ ನನ್ನ ಮಗನ ಕುತ್ತಿಗೆ ಕಡಿದು ಕೊಲೆ ಮಾಡಿ ಗುರುತು ಸಿಗಬಾರದೆಂದು ರುಂಡು ಮತ್ತು ಮುಂಡವನ್ನು ಬೇರ್ಪಡಿಸಿ ಮುಂಡವನ್ನು ಬುಕ್ಕಾಂಬೂದಿ ಕೆರೆಗೆ ಚೀಲದಲ್ಲಿ ಕಟ್ಟಿ ಎಸೆದಿರುವುದಾಗಿ ತಿಳಿಯಿತು ಎಂದರೆ ಸರಿಯಲ್ಲ.

17. ದಿನಾಂಕ 07.11.2018 ರಂದು ಬೆಳಿಗ್ಗೆ ನನ್ನ ಮಗ 1 ನೇ ಆರೋಪಿಯ ಮನೆಗೆ ಹೋಗಿದ್ದು ಅಂದಿನಿಂದ ಕಾಣೆಯಾಗಿದ್ದಾಗಿ ಮತ್ತು ಆಕೆಯ ಮೇಲೆ ಅನುಮಾನವಿರುವುದಾಗಿ ತಿಳಿಸಿ ದಿನಾಂಕ 11.11.2018 ರಂದು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.15 ಎಂದು ಗುರುತಿಸಲಾಯಿತು.

18. ದಿನಾಂಕ 13.11.2018 ರಂದು ಪೊಲೀಸರು ನನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆ ದಿನ ಪೊಲೀಸರು ನನ್ನ ಮಗ ರುದ್ರಸ್ವಾಮಿಯನ್ನು ಕೊಲೆ ಮಾಡಿದ 1 ರಿಂದ 3 ಜನ ಆರೋಪಿತರನ್ನು ಬಂಧಿಸಿ ಸದರಿಯವರು ನನ್ನ ಮಗನ ರುಂಡವನ್ನು ಬುಕ್ಕಾಂಬೂದಿ ಕೆರೆಯಲ್ಲಿ ಚೀಲದಲ್ಲಿ ಕಟ್ಟಿ ಎಸೆದಿರುವುದಾಗಿ ತಿಳಿಸಿದ ಮೇರೆಗೆ ದಿನಾಂಕ 12.11.2018 ರಂದು ನನ್ನ ಮಗನ ರುಂಡವನ್ನು ಪತ್ತೆ ಮಾಡಿ ಅದನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಿರುವುದಾಗಿ ನಮಗೆ ತಿಳಿದುಬಂದ ಮೇರೆಗೆ ಆ ದಿನ ಅಂದರೆ ದಿನಾಂಕ 13.11.2018 ರಂದು ನಾನು, ಚಾಸಾ.8 ಮತ್ತು ಚಾಸಾ.9 ರವರು ಶಿವಮೊಗ್ಗದ ಸದರಿ ಆಸ್ಪತ್ರೆಗೆ ಹೋಗಿದ್ದಾಗಿ ತಿಳಿಸಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ರುಂಡವನ್ನು ನೋಡಲಾಗಿ ಅದು ನನ್ನ ಮಗ ರುದ್ರಸ್ವಾಮಿಯದ್ದಾಗಿರುತ್ತದೆ ಎಂದರೆ ಸರಿಯಲ್ಲ.

19. ನನ್ನ ಮಗನ ಸಾವಿಗೆ ಕಾರಣ ತಿಳಿಯಲಾಗಿ ರುದ್ರಸ್ವಾಮಿಯು ಬೆಂಗಳೂರಿನ ಚಾಮುಂಡೇಶ್ವರಿ ನಗರದಲ್ಲಿ ವಾಸವಿದ್ದ ಸಮಯದಲ್ಲಿ 1 ನೇ ಆರೋಪಿ ಮತ್ತು ಆಕೆಯ ಗಂಡ ಸ್ವಾಮಿಯನ್ನು ಪರಿಚಯ ಮಾಡಿಕೊಂಡು ಆತ 1 ನೇ ಆರೋಪಿಯೊಂದಿಗೆ ಅನೈತಿಕ ಸಂಬಂಧ ಬೆಳೆಸಿಕೊಂಡಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ನಂತರ ಆಕೆಯೊಂದಿಗೆ ಫೋಟೋ ತೆಗೆಸಿಕೊಂಡು ನನ್ನ ಮಗ ರುದ್ರಸ್ವಾಮಿ ಆಕೆಯ

ಗಂಡನಿಗೆ ತೋರಿಸುವುದಾಗಿ ಮತ್ತು Face book ನಲ್ಲಿ ಬಿಡುವುದಾಗಿ ಬ್ಲಾಕ್ ಮೇಲ್ ಮಾಡಿ ಕಿರುಕುಳ ನೀಡುತ್ತಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ನನ್ನ ಮಗನ ಕಿರುಕುಳವನ್ನು ತಾಳಲಾರದೇ 1 ನೇ ಆರೋಪಿಯು ಆ ವಿಚಾರವನ್ನು ತನ್ನ ತಂದೆ ತಾಯಿಗೆ ತಿಳಿಸಿದ್ದಾಗಿ ನಂತರ ದಿನಾಂಕ 07.11.2018 ರಂದು ಆರೋಪಿತರು ನನ್ನ ಮಗನನ್ನು ಬೆಂಕಿಕೆರೆಗೆ ಕರೆಯಿಸಿಕೊಂಡು ಅವರ ತೋಟಕ್ಕೆ ಕರೆದುಕೊಂಡು ಹೋಗಿ ಅದೇ ದಿನ ಸಂಜೆ 5.00 ಗಂಟೆ ಸಮಯದಲ್ಲಿ 1 ರಿಂದ 4 ನೇ ಆರೋಪಿತರು ಸೇರಿ ಮಚ್ಚು ಮತ್ತು ಕುಡುಗೋಲಿನಿಂದ ನನ್ನ ಮಗನ ಕುತ್ತಿಗೆಯನ್ನು ಕಡಿದು ರುಂಡ-ಮುಂಡವನ್ನು ಬೇರ್ಪಡಿಸಿ ಪ್ರತ್ಯೇಕ ಗೋಣಿ ಚೀಲಗಳಲ್ಲಿ ತುಂಬಿಕೊಂಡು ನನ್ನ ಮಗನ ಕಾರಿನಲ್ಲಿಯೇ ಬುಕ್ಕಾಂಬೂದಿ ಕೆರೆಗೆ ತಂದು ಎಸೆದು ಹೋಗಿದ್ದಾಗಿ ತಿಳಿಯಿತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ತಿಳಿದು ಬಂದ ಬಗ್ಗೆ ದಿನಾಂಕ 13.11.2018 ರಂದು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಮುಂದುವರೆದ ಹೇಳಿಕೆಯನ್ನು ನಿಪಿ.16 ಎಂದು ಗುರುತಿಸಲಾಯಿತು.

20. ಪ್ರತ್ಯೇಕವಾಗಿ ದೊರೆತ ರುಂಡ ಮತ್ತು ಮುಂಡಗಳ DNA ಪರೀಕ್ಷೆಗಾಗಿ ದಿನಾಂಕ 22.01.2019 ರಂದು ತರೀಕೆರೆ ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳು ನನ್ನ ರಕ್ತದ ಮಾದರಿಯನ್ನು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಆ

ಸಮಯದಲ್ಲಿ ನನ್ನ ಒಪ್ಪಿಗೆಯನ್ನು ಪಡೆದು ನಿಪಿ.14 ರಂತೆ Identification form ನಲ್ಲಿ ನನ್ನ ಫೋಟೋವನ್ನು ಲಗತ್ತಿಸಿ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

21. ಈ ಪ್ರಕರಣದಲ್ಲಿ ಪ್ರತ್ಯೇಕವಾಗಿ ದೊರೆತ ರುಂಡ ಮತ್ತು ಮುಂಡವನ್ನು ಗುರುತಿಸಿ ಅದು ನಿಮ್ಮ ಮಗ ರುದ್ರಸ್ವಾಮಿಯದ್ದು ಎಂದು ತಿಳಿಸಿ, ಆತ 1 ನೇ ಆರೋಪಿಯ ಮನೆಗೆ ಹೋದ ಬಳಿಕ ಕಾಣೆಯಾದ ಬಗ್ಗೆ ತಿಳಿಸಿ ಆತನ ಸಾವಿಗೆ ಆರೋಪಿತರು ಕಾರಣರೆಂದು ತಿಳಿದುಬಂದ ಬಗ್ಗೆ ಪೊಲೀಸರಿಗೆ ನಿಪಿ.15 ಮತ್ತು ನಿಪಿ.16 ರಂತೆ ಹೇಳಿಕೆಗಳನ್ನು ನೀಡಿದ್ದರೂ ಸಹ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.